ದಿನಾಂಕ 21-01-2020 ರಂದು ಸಾಕ್ಷಿಧಾರರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

: ಪಾಟೀ ಸವಾಲುಃ ವಾದಿ ಪರ ವಕೀಲರಿಂದ :

ನಮ್ಮ ತಾಯಿ ಚನ್ನವ್ವ ಕೋಂ ನಾಗಪ್ಪ ಮಡ್ಲಿಕರ. ನಮ್ಮ ತಾಯಿಯ ತಂದೆಯ ಹೆಸರು ತಿಪ್ಪಣ್ಣ ಗದಿಗಪ್ಪ ಕ್ಷೌರದ ಇರುತ್ತದೆ. ಗದಿಗೆಪ್ಪನಿಗೆ ಐದು ಜನ ಗಂಡು ಮಕ್ಕಳು ಇದ್ದರು. ಒಬ್ಬಳೇ ಹೆಣ್ಣು ಮಗಳು ಇದ್ದಾಳೆ. 1) ತಿಪ್ಪಣ್ಣ 2) ಚನ್ನಬಸಪ್ಪ 3) ಶಂಕ್ರಪ್ಪ 4) ಫಕ್ಕೀರಪ್ಪ 5) ಬಸವಣ್ಣೆಪ್ಪ 6) ಬಂದಮ್ಮ ಅಂತಾ ಇದ್ದಾರೆ. ನಮ್ಮ ತಂದೆ ಶಿಕ್ಷಕರಾಗಿದ್ದರು. ನಮ್ಮ ತಂದೆಯ ಹೆಸರು ನಾಗರಾಜ ಮರಿಯಪ್ಪ ಮಡ್ಲಿಕರ. ನಮ್ಮ

ತಂದೆ ಶಿಕ್ಷಕರಾಗಿ 30-35 ವರ್ಷಗಳ ಕಾಲ ಸರಕಾರಿ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಮಾಡಿದ್ದಾರೆ.. ಹಾವೇರಿಯಲ್ಲಿ ಎಂಟು ವರ್ಷಗಳ ಕಾಲ ಶಿಕ್ಷಕರಾಗಿ ಸೇವೆ ಮಾಡಿದ್ದಾರೆ. ಹಾವೇರಿ, ಬಂಕಾಪುರ, ಸವಣೂರ, ಕರಡೀಕೊಪ್ಪ ಬೊಮ್ಮಸಮುದ್ರ ಮತ್ತು ಹಾನಗಲ್ ನಲ್ಲಿ ಶಿಕ್ಷಕರಾಗಿ ಸೇವೆ ಮಾಡಿದ್ದಾರೆ. 1979 ರಿಂದ 1984-85 ರ ವರೆಗೆ ಹಾನಗಲ್ ನಲ್ಲಿ ಶಿಕ್ಷಕರಾಗಿ ಸೇವೆ ಮಾಡಿದ್ದಾರೆ. ಅದಕ್ಕಿಂತ ಪೂರ್ವದಲ್ಲಿ ಹಾನಗಲ್ ತಾಲ್ಲೂಕನ್ನು ಹೊರತುಪಡಿಸಿ ಬೇರೆ ಬೇರೆ ಕಡೆಗಳಲ್ಲಿ ಕೆಲಸ ಮಾಡಿದ್ದಾರೆ. ನಮ್ಮ ತಂದೆ ಯಾವ ಯಾವ ಊರುಗಳಲ್ಲಿ ಶಿಕ್ಷಕರಾಗಿ ಕೆಲಸ ನಿರ್ವಹಿಸಿದ್ದಾರೋ ಅದೇ ಊರುಗಳಲ್ಲಿ ಕುಟುಂಬ ಸಮೇತ ವಾಸ ಮಾಡುತ್ತಿದ್ದರು. ನಮ್ಮ ಅಜ್ಜ ಗದಿಗೆಪ್ಪನ ಎಲ್ಲ ಮಕ್ಕಳು ವ್ಯವಸಾಯವನ್ನು ಅವಲಂಬಿಸಿದ್ದರು. ಗದಿಗೆಪ್ಪನ ಹಿರಿಯ ಮಗ ತಿಪ್ಪಣ್ಣ. ಗದಿಗೆಪ್ಪನ ಎಲ್ಲ ಮಕ್ಕಳು ಒಟ್ಟು ಕುಟುಂಬದಲ್ಲಿ ಶೇತ್ಕರಿ ಮಾಡಿಕೊಂಡು ಬಂದಿದ್ದರು ಅಂದರೆ ನಿಜ. ಗದಿಗೆಪ್ಪನ ಎಲ್ಲ ಮಕ್ಕಳು ಒಟ್ಟು ಕುಟುಂಬದ ಎಲ್ಲ ಜಮೀನುಗಳನ್ನು ವ್ಯವಸಾಯ ಮಾಡಿಕೊಂಡು ಬಂದಿದ್ದರು ಅಂದರೆ ನಿಜ. ನಂತರದಲ್ಲಿ ಬೇರೆ ಬೇರೆಯಾಗಿ ವ್ಯವಸಾಯ ಮಾಡುತ್ತಾ ಬಂದಿದ್ದಾರೆ. ಆದರೆ ಯಾವ ಸಾಲಿನಿಂದ ಬೇರೆ ಬೇರೆಯಾಗಿ ವ್ಯವಸಾಯ ಮಾಡಿದ್ದಾರೆ ಅಂದರೆ ನನಗೀಗ ನೆನಪಿಲ್ಲಾ. ಶಂಕ್ರಪ್ಪ ಎನ್ನುವವನಿಗೆ ಕೆರೆಯ ಕೆಳಗಡೆ ಒಂದು ಎಕರೆ ಗದ್ದೆ ಜಮೀನು ಇತ್ತು. ಒಂದು ಎಕರೆ ಹಕ್ಕಲು ಜಮೀನು ಇತ್ತು. ಅದೇ ರೀತಿ ಗೆದಿಗೆಪ್ಪನ ಎಲ್ಲ ಮಕ್ಕಳಿಗೂ ತಲಾ ಒಂದು ಎಕರೆ ಗದ್ದೆ ಜಮೀನು ಇತ್ತು ಒಂದು ಎಕರೆ ಹಕ್ಕಲು ಜಮೀನು ಬಂದಿತ್ತು. ಗದಿಗೆಪ್ಪನ ಕುಟುಂಬಕ್ಕೆ ಎಷ್ಟು ಎಕರೆ ಜಮೀನು ಇದ್ದವು ಅಂತಾ ನನಗೆ ಹೇಳಲು ಬರುವುದಿಲ್ಲಾ. ಬಸಪ್ಪ ಎನ್ನುವವರು ಮದುವೆಯಾಗದೇ ಮೃತರಾಗಿದ್ದಾರೆ. ಅವರಿಗೆ ಯಾರೂ ವಾರಸುದಾರರು ಇರುವುದಿಲ್ಲ. ಆದ್ದರಿಂದ ಅವರಿಗೆ ಯಾವುದೇ ಜಮೀನನ್ನು ಕೊಟ್ಟಿರಲಿಲ್ಲ. ಗದಿಗೆಪ್ಪನ ನಾಲ್ಕೂ ಜನ ಮಕ್ಕಳಿಗೂ ಮದುವೆಯ ನಂತರ ಒಂದೊಂದು ಮನೆಗಳನ್ನೂ ಸಹ ಕೊಡಲಾಗಿತ್ತು. ನಮ್ಮ ಮನೆತನಕ್ಕೆ ಗದಿಗೆಪ್ಪನಿಂದ ಎಷ್ಟು ಆಸ್ತಿಗಳು ಬಂದಿದ್ದವು ಅಂತಾ ನನಗೆ ಹೇಳಲು ಬರುವುದಿಲ್ಲ. ಗದಿಗೆಪ್ಪನ ಮಕ್ಕಳಾದ 1) ತಿಪ್ಪಣ್ಣ 2) ಚನ್ನಬಸಪ್ಪ 3) ಶಂಕ್ರಪ್ಪ 4) ಫಕ್ಕೀರಪ್ಪ 5) ಬಸವಣ್ಣೆಪ್ಪ ಎಲ್ಲರೂ ಸೇರಿ ಸಾಮೂಹಿಕವಾಗಿ ಭೂನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಅಂದರೆ ಸರಿಯಲಲ. ನಮ್ಮ ಅಜ್ಜ ತಿಪ್ಪಣ್ಣ ಮಾತ್ರ ಸಲ್ಲಿಸಿದ್ದರು ಗದಿಗೆಪ್ಪನ ಮಕ್ಕಳಾದ 1) ತಿಪ್ಪಣ್ಣ 2) ಚನ್ನಬಸಪ್ಪ

3) ಶಂಕ್ರಪ್ಪ 4) ಫಕ್ಕೀರಪ್ಪ 5) ಬಸವಣ್ಣೆಪ್ಪ ಎಲ್ಲರೂ ಸೇರಿ ಸಾಮೂಹಿಕವಾಗಿ ವ್ಯವಸಾಯ ಮಾಡುತ್ತಿದ್ದರು ಅಂದರೆ ಸಾಕ್ಷಿಯು ಕ್ರಮೇಣ ಬೇರೆ ಬೆರೆಯಾಗಿ ವ್ಯವಸಾಯ ಮಾಡುತ್ತಿದ್ದರು ಅನ್ನುತ್ತಾರೆ ದಿನಾಂಕಃ 02-01-1980 ರಂದು ನಮ್ಮ ತಂದೆಯ ಎಲ್ಲ ಸಹೋದರರು ವಿಭಾಗ ಮಾಡಿಕೊಂಡಿದ್ದಾರೆ ಅಂದರೆ ನಿಜ. ಆ ವಿಭಾಗದ ಪ್ರಕಾರ ಡ.ನಂ.760 ಮಂಜೂರಾಗಿದೆ ಅಂದರೆ ನಿಜ. ಆ ಪ್ರಕಾರ ನಮ್ಮ ತಂದೆಯ ಮತ್ತು ಆತನ ಎಲ್ಲ ಸಹೋದರರು ಪ್ರತ್ಯೇಕವಾಗಿ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ ಅಂದರೆ ನಿಜ. ಸದರಿ ವಿಭಾಗದಲ್ಲಿ ಸರ್ವೆ ನಂ.20 ರಲ್ಲಿ 01 ಎಕರೆ 09 ಗುಂಟೆ ಪೂರಾ ಜಮೀನು ಆತನ ಹಿಸ್ಸೆಗೆ ಬಂದಿದೆ ಅಂದರೆ ನಿಜ. ಅದೇ ರೀತಿ ಫಕ್ಕೀರಪ್ಪನ ಹಿಸ್ಸೆಗೆ ಸರ್ವೆ ನಂ.2/1 ಇ ರಲ್ಲಿ 01 ಎಕರೆ ಜಮೀನು ಆತನ ಹಿಸ್ಸೆಗೆ ಬಂದಿದೆ ಅಂದರೆ ನಿಜ. ಸರ್ವೆ ನಂ.4 ಅ ಪೈಕಿ 27 ಗುಂಟೆ ಜಮೀನು ಬಂದಿದೆ. ಸಾಕ್ಷಿ ಪುನಃ ಸರ್ವೆ ನಂ.4 ಅ ರಲ್ಲಿ ಫಕ್ಕೀರಪ್ಪನ ಹಿಸ್ಸೆಗೆ ಬಂದಿರುವುದು ತಪ್ಪು ಇರುತ್ತದೆ ಅನ್ನುತ್ತಾರೆ. ಶಂಕ್ರಪಪನ ಹಿಸ್ಸೆಗೆ ಸರ್ವೆ ನಂ.2/1 ಇ ರಲ್ಲಿ 01 ಎಕರೆ ಜಮೀನು ಬಂದಿದೆ. ಸರ್ವೆ ನಂ.4/ಅ ಪೈಕಿ 27 ಗುಂಟೆ ಶಂಕ್ರಪ್ಪನ ಹಿಸ್ಸೆಗೆ ಬಂದಿದೆ. ಸಾಕ್ಷಿಯು 01 ಎಕರೆ ಬಂದಿದ್ದು ಸರಿ ಇದ್ದು 27 ಗುಂಟೆ ಬಂದಿರುವುದು ತಪ್ಪು ಇರುತ್ತದೆ ಅನ್ನುತ್ತಾರೆ. ಚನ್ನಬಸಪ್ಪನ ಹಿಸ್ಸೆಗೆ ಸರ್ವೆ ನಂ.2/1 ಇ 01 ಎಕರೆ ಬಂದಿದೆ ಅಂದರೆ ನಿಜ. ಸರ್ವೆ ನಂ.4/ಅ ಪೈಕಿ 26 ಗುಂಟೆ ಚನ್ನಬಸಪ್ಪನ ಹಿಸ್ಸೆಗೆ ಬಂದಿದೆ ಅಂದರೆ ಸರಿಯಲ್ಲಾ. ಸರ್ವೆ ನಂ.4/ಅ ರಲ್ಲಿ ತಿಪ್ಪಣ್ಣನಿಗೆ ಯಾವುದೇ ಹಿಸ್ಸೆ ಬಂದಿರುವುದಿಲ್ಲಾ ಅಂದರೆ ಸರಿಯಲ್ಲ. ಸರ್ವೆ ನಂ.4/ಅ ರಲ್ಲಿ ಜಮೀನನ್ನು ಹೊರತು ಪಡಿಸಿ ತಿಪ್ಪಣ್ಣನ ಮಗಳಾದ ಚನ್ನವ್ವ ಮಡ್ಲಿಕ್ಕರ ಎನ್ನುವವರಿಗೆ ಯಾವುದೇ ಹಿಸ್ಸೆ ಇಲ್ಲಾ ಲಅಂದರೆ ಸರಿಯಲ್ಲಾ. ಸರ್ವೆ ನಂ.4/ಅ ಜಮೀನ್ನು ಹೊರತುಪಡಿಸಿ ನಾವು ಬೇರೆ ಕಡೆಗೆ 02 ಎಕರೆ ಜಮೀನನ್ನು ಸಾಗುವಳಿ ಮಾಡುತ್ತೇವೆ ಅಂದರೆ ಸರಿಯಲ್ಲಾ.

ಭೂನ್ಯಾಯ ಮಂಡಳಿಗೆ ತಿಪ್ಪಣ್ಣ ಮತ್ತು ಆತನ ಎಲ್ಲ ಸಹೋದರರು ಸೇರಿ ಅರ್ಜಿ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲಾ. ಬಸನಗೌಡ ಮುದಕನಗೌಡ ಎನ್ನುವವರ ಪರಿಚಯ ಇದೆ. ಅವರು ನಮ್ಮ ಊರಿನ ಹಿರಿಯರು. ಅವರು ನಮ್ಮ ಎಲ್ಲರ ಪರವಾಗಿ ಮೂಲ ದಾವಾ ನಂ. 118/2002 ರಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದಾರೆ ಅಂದರೆ ನಿಜ ಸದರಿಯವರು ನಮ್ಮ ಅಜ್ಜ ತಿಪ್ಪಣ್ಣ ಮತ್ತು ಆತನ ಸಹೋದರರಿಗೆ

ಯಾವ ಯಾವ ಆಸ್ತಿಗಳು ಬಂದಿರುತ್ತವೆ ಎಂದು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಅಂದರೆ ನಿಜ . ಆ ಪ್ರಕಾರ ನಮ್ಮ ಅಜ್ಜ ತಿಪ್ಪಣ್ಣ ಮತ್ತು ನಮ್ಮ ತಾಯಿ ಚೆನ್ನವ್ವ ಮತ್ತು ನಮ್ಮ ಅಜ್ಜನ ಸಹೋದರರು ಚೆನ್ನಬಸಪ್ಪ ಶಂಕ್ರಪ್ಪ , ಫಕೀರಪ್ಪ ಎಲ್ಲರೂ ಬೇರೆ ಬೇರೆಯಾಗಿ ಅವರಿಗೆ ಬಂದ ಹಿಸ್ಸೆಗಳಲ್ಲಿ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಅಂದರೆ ನಿಜ. ನಿಪಿ-1 ಸರ್ವೆ ನಂ 4/ ಅ ಕ್ಷೇತ್ರ 2 ಎಕರೆ ಜಮೀನಿನ ಪಹಣಿ ಪತ್ರಿಕೆ ಅಂದರೆ ನಿಜ. ನಿಪಿ-1 ರ ಕಾಲಂ ನಂ.11 ರಲ್ಲಿ ರೈತರಾಗಿ ಸಾಗುವಳಿ ಮಾಡುತ್ತಿದ್ದ ಬಗ್ಗೆ ಚೆನ್ನಬಸಪ್ಪ, ಫಕೀರಪ್ಪ, ಶಂಕ್ರಪ್ಪನಿಗೆ ಮೂರು ಜನ ಮಕ್ಕಳಿದ್ದಾರೆ. ಎಲ್ಲರೂ ರೈತನಾತೆಯಿಂದ ಸಾಗುವಳಿ ಮಾಡುತ್ತಾರೆ ಅಂದರೆ ಸರಿಯಲ್ಲ. ತಿಪ್ಪಣ್ಣ ಕುಟುಂಬದ ಪರವಾಗಿ ಹಿರಿಯ ಅಣ್ಣನಾಗಿರುವುದರಿಂದ ಎಲ್ಲರ ಪರವಾಗಿ ಅರ್ಜಿ ಸಲ್ಲಿಸಿದ್ದ ಅಂದರೆ ಸರಿಯಲ್ಲ. ಮೂಕಪ್ಪ ಫಕೀರಪ್ಪ ಕ್ಷೌರದ ನಮ್ಮ ಮಾವನಾಗಬೇಕು. ಅವರು ಸಹ ಮೂಲ ದಾವಾ ನಂ.118/2001 ರಲ್ಲಿ ಅವರು ಕೂಡ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದಾರೆ ಅಂದರೆ ನಿಜ ಸದರಿಯವರು ನಮ್ಮ ಪರವಾಗಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಯಾರು ಯಾರಿಗೆ ಯಾವ ಜಮೀನುಗಳು ವಿಭಾಗದಲ್ಲಿ ಬಂದಿರುತ್ತವೆ ಎಂದು ಪ್ರಮಾಣ ಪತ್ರ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ ಮೂಲ ದಾವಾ ನಂ. 118/2001 ರಲ್ಲಿ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ನನಗೆ ಗೊತ್ತಿಲ್ಲ ಈ ದಾವೆಯ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಆ ದಾವೆಯಲ್ಲಿ ನಮ್ಮ ಪರವಾಗಿ ಬಿ. ಎಸ್. ಅಕ್ಕಿವಳ್ಳಿ ವಕೀಲರು ಪ್ರತಿನಿದಿಸಿದ್ದರು ಅಂದರೆ ನಿಜ. ನಮ್ಮ ವಕೀಲರು ಮುಖ್ಯ ವಿಚಾರಣೆಯ ಮಾಹಿತಿ ಪಡೆದ ಪ್ರಮಾಣ ಪತ್ರ ಸಲ್ಲಿಸುತ್ತಾರೆ ಅಂದರೆ ಸಾಕ್ಷಿಯು ಪ್ರಮಾಣ ಪತ್ರ ಸಲ್ಲಿಸಿದ್ದಾರೆ ಆದರೆ ಮಾಹಿತಿ ಸರಿ ಇರುವುದಿಲ್ಲ ಅನ್ನುತ್ತಾರೆ. ಡ ನಂ. 760 ನಮ್ಮ ಮನೆತನದ ವಿಭಾಗ ಆದ ಬಗ್ಗೆ ಮಂಜೂರಾಗಿದೆ ಎನ್ನುವುದು ಸರಿಯಲ್ಲ. ನಿಪಿ-6 ಭೂ ನ್ಯಾಯ ಮಂಡಳಿಗೆ ಸಲ್ಲಿಸಿದ್ದ ಫಾರಂ ನಂಬರ 7 ರಲ್ಲಿ ನಮ್ಮ ಅಜ್ಜ ತಿಪ್ಪಣ್ಣ ತನ್ನ ಮತ್ತು ತನ್ನ ಸಹೋದರರ ಪರವಾಗಿ ಅರ್ಜಿ ಸಲ್ಲಿಸಿದ್ದಾರೆ ಅಂದರೆ ನನಗೆ ಮಾಹಿತಿ ಇರುವುದಿಲ್ಲ.

ನಾನು 10 ನೇ ತರಗತಿಯವರೆಗೆ ವಿಧಾಭ್ಯಾಸ ಮಾಡಿರುತ್ತೇನೆ. ನಾನು ಮಂಗಳೂರಿನ ಫಾದರ ಮಲ್ಲರ ಆಸ್ಪತ್ರೆಯಲ್ಲಿ ನರ್ಸ ಆಗಿ ಮೂರು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಿಪಿ-6 ರಂತೆ ನಮ್ಮ ಅಜ್ಜ ತಿಪ್ಪಣ್ಣ ತನ್ನ ಮತ್ತು ತನ್ನ ಸಹೋದರರ ಪರವಾಗಿ ಸರ್ವೆ ನಂ. 4 ಅ ಕ್ಷೇತ್ರ 2 ಎಕರೆ ಜಮೀನಿಗೆ

ಸಾಮೂಹಿಕವಾಗಿ ಅರ್ಜಿ ಸಲ್ಲಿಸಿದ್ದಾರೆ ಅಂದರೆ ನಿಜ. ನಿಪಿ–6 ದಾಖಲೆ ಕಾನೂನು ಬದ್ಧವಾಗಿರುತ್ತದೆ ಅಂದರೆ ನಿಜ.ಸದರಿ ದಾವಾ ಜಮೀನನ್ನು ಗದಿಗೆಪ್ಪನ ನಾಲ್ಕು ಜನ ಮಕ್ಕಳು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಾರೆ ಎನ್ನುವುದು ಸರಿಯಲ್ಲ. 1952–53 ರಿಂದ ಚನ್ನಬಸಪ್ಪ, ತಿಪ್ಪಣ್ಣ ಫಕೀರಪ್ಪ ಶಂಕ್ರಪ್ಪ ಎನ್ನುವವರು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಾರೆ ಎಂದು ಭೂನ್ಯಾಯಮಂಡಳಿಯ ದಾಖಲೆ ಯಲ್ಲಿ ಮತ್ತು ಕಂದಾಯ ದಾಖಲೆಯಲ್ಲಿ ನಮೂದಾಗಿದೆ ಎನ್ನುವುದು ಸರಿಯಲ್ಲ. ನಿಪಿ–8 ಕೈ ಬರಹಂ ಪಹಣಿ ಪತ್ರಿಕೆ 1952–53 ರಿಂದ ಭೂನ್ಯಾಯಮಂಡಳಿಯ ಆದೇಶ ಆಗುವವರೆಗೆ ತಿಪ್ಪಣ್ಣ ಮತ್ತು ಆತನ ಸಹೋದರರು ಸಾಮಾಹಿಕವಾಗಿ ಅವರ ಹೆಸರು ದಾಖಲಾಗಿವೆ ಅಂದರೆ ಸರಿಯಲ್ಲ. ಸರ್ವೆ ನಂ. 4 ಅ ಪಹಣಿ ಪತ್ರಿಕೆಯಲ್ಲಿ ನಾಲ್ಕು ಜನ ಸಹೋದರರ ಹೆಸರು ನಮೂದಾಗಿದೆ ಅಂದರೆ ನಿಜ. ಭೂನ್ಯಾಯ ಮಂಡಳಿಯವರು ದಾವ ಸರ್ವೆ ನಂ 4 ಅ ಒಟ್ಟು ಕುಟುಂಬದ ಪರವಾಗಿ ಮಂಜೂರು ಮಾಡಿದ್ದಾರೆ ಅಂದರೆ ಸರಿಯಲ್ಲ. ತಿಪ್ಪಣ್ಣ ಮತ್ತು ಆತನ ಸಹೋದರರು ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ನನಗೆ ಒಟ್ಟು ಕುಟುಂಬದ ಎಲ್ಲ ವ್ಯವಹಾರಗಳ ಬಗ್ಗೆ ಮತ್ತು ಯಾವಾಗ ವಿಭಾಗ ಮಾಡಿಕೊಂಡಿದ್ದಾರೆ ಅಂತಾ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಸುತ್ತೇನೆ ಅಂದರೆ ಸರಿಯಲ್ಲ. ನಮ್ಮ ತಂದೆ ತಾಯಿ ಯಾವತ್ತು ವ್ಯವಸಾಯ ಮಾಡಿಲ್ಲಾ ಅಂದರೆ ನಿಜ. ಸಾಕ್ಷಿಯು ಮುಂದುವರೆದು ನಮ್ಮ ತಂದೆ ನಿವೃತ್ತಿ ಆದ ನಂತರ ವ್ಯವಸಾಯ ಮಾಡಿದ್ದಾರೆ. ನಮ್ಮ ತಂದೆ 1981–82 ರಲ್ಲಿ ನಿವೃತ್ತರಾಗಿರುತ್ತಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ